ದಿನಾಂಕಃ 12.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಬಿ ಸಿ ಎಸ್ ವಕೀಲರಿಂದಃ**

ನಾನು ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ. ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಸ್ ಎನ್ ಕೆ ವಕೀಲರಿಂದಃ**

ವಾದಿಗಳು ಮತ್ತು ಪ್ರತಿವಾದಿಗಳು ನಮ್ಮ ಊರಿನವರಾದ ಕಾರಣ ನನಗೆ ಪರಿಚಯ. 1 ನೇ ಪ್ರತಿವಾದಿಯ ಬಗ್ಗೆ ತಿಳಿದಿದೆ, ಅವರು ಗೊತ್ತು. ಈ ಬಗ್ಗೆ ನನ್ನ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ನಾನು ನೋಡಿಲ್ಲ. ನಾನು ಯಾವ ಆಧಾರದ ಮೇಲೆ ಪ್ರಮಾಣಪತ್ರ ಸಲ್ಲಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ ಸಾಕ್ಷಿದಾರರಾಗಿ ಬರಲು ಹೇಳಿದ್ದರು, ನನ್ನ ಸಹಿಯನ್ನು ಪಡೆದಿದ್ದಾರೆ, ನನಗೆ ಊರಿನ ವಿಚಾರ ತಿಳಿದಿದೆ ಆದ್ದರಿಂದ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ನನ್ನ ಪ್ರಮಾಣಪತ್ರದಲ್ಲಿ ನಂಜೇಗೌಡರವರಿಗೆ ಆಸ್ತಿ ಸೇರಿರುವುದು ಎಂದು ಬರೆಸಿದ್ದೇನೆ, ಅವರ ಹೆಸರಿನಲ್ಲಿ ನೊಂದಾಯಿತ ಪತ್ರವನ್ನು 2000 ನೇ ಇಸವಿಯಲ್ಲಿ ನೋಡಿರುತ್ತೇನೆ, ಅದರ ಆಧಾರದ ಮೇಲೆ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ. ದಾವಾ ಸ್ವತ್ತು ನಂಜೇಗೌಡರವರಿಗೆ ಕ್ರಯವಾಗಿರುತ್ತದೆ. ಸಣ್ಣಮ್ಮರವರು ಮನೆಯಲ್ಲೇ ಇದ್ದರು ಯಾವ ಕೆಲಸಕ್ಕೂ ಹೋಗುತ್ತಿರಲಿಲ್ಲ. ವಾದಿಗಳು ದಾವಾಸ್ತಿ ಸಣ್ಣಮ್ಮರವರಿಗೆ ಸೇರಿರುವ ಸ್ವಯಾರ್ಜಿತ ಆಸ್ತಿ ಎಂದು ಹೇಳಿರುತ್ತಾರೆ ಎಂದರೆ ಸುಳ್ಳು, ಸಾಕ್ಷಿ ಮುಂದುವರಿದು ನಂಜೇಗೌಡರವರಿಗೆ ಸೇರಿದ ಆಸ್ತಿ ಎಂದು ನುಡಿಯುತ್ತಾರೆ. ಸಣ್ಣಮ್ಮನವರು ಕಾಫಿ ವರ್ಕ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ 2000 ನೇ ಇಸವಿಯಲ್ಲಿ ಅವರು ಮನೆಯಲ್ಲೇ ಇದ್ದರು ಅವರು ಕೆಲಸ ಮಾಡುತ್ತಿದ್ದನ್ನು

ನಾನು ನೋಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಣ್ಣಮ್ಮನವರು ಕಾಫಿ ವರ್ಕ್ಸ್ ನಿಂದ ನಿವೃತ್ತಿಯಾದ ನಂತರ ಬಂದ ಹಣದಿಂದ ದಾವಾಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾಸ್ತಿ ಪಿತ್ರಾರ್ಜಿತ ಸ್ವತ್ತು ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ನಂಜೇಗೌಡರವರಿಗೆ ಸೇರಿರುವ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ಹೇಳಿ ಬರೆಸಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾಸ್ತಿ ಸಣ್ಣಮ್ಮನವರಿಗೆ ಸೇರಿರುವ ಸ್ವಯಾರ್ಜಿತ ಆಸ್ತಿಯಾದ ಕಾರಣ ಅವರು 1ನೇ ಪ್ರತಿವಾದಿಗೆ ದಾನಪತ್ರದ ಮೂಲಕ ದಾವಾಸ್ತಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ನೋಡಿರುವುದಿಲ್ಲ, ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾನ ಆದ ನಂತರ ಪಹಣಿ 1ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದ್ದೆ ಹಾಗೂ ಅವರೇ ದಾವಾಸ್ತಿಯನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಣ್ಣಮ್ಮನವರು ಬದುಕಿದ್ದಾಗ ಅವರೇ ಉಳುಮೆ ಮಾಡುತ್ತಿರಲಿಲ್ಲ ಬೇರೆಯವರಿಗೆ ನೀಡಿದ್ದರು. ಅವರು ನಂಜೇಗೌಡರ ಹೆಂಡತಿಯಾದ ಕಾರಣ ಬೇರೆಯವರಿಗೆ ಉಳುಮೆ ಮಾಡಲು ನೀಡುತ್ತಿದ್ದರು.

ಮರುವಿಚಾರಣೆಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.